**ದಿನಾಂಕ 19.01.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ 1 ನೇ ಪ್ರತಿವಾದಿಯ ಪರವಾಗಿ ಶ್ರೀ ಕೆ.ಎಸ್.ಬಿ. ವಕೀಲರಿಂದಃ</u>**

1. ಕೆ.ಎಂ.ರಾಮಕೃಷ್ಣಪ್ಪನವರು ತುಂಬಾ ಅನುಕೂಲಸ್ಥರು ಎಂದರೆ ಸರಿ. ಅವರು ಸಾಯುವ ಕಾಲಕ್ಕೆ ನೂರಾರು ಎಕರೆ ಆಸ್ತಿಗಳು ಇತ್ತು ಎಂದರೆ ಸರಿ, ಅದರಲ್ಲಿ ಪಿತ್ರಾರ್ಜಿತ ಆಸ್ತಿಗಳೂ ಸಹ ಇದ್ದವು ಎಂದರೆ ಸರಿ. ಅವರು ಅನೇಕ ಆಸ್ತಿಗಳನ್ನು ಅವರ ಹೆಂಡತಿ, ಮಗ, ಮಗಳ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅವರು ಹೆಂಡತಿ, ಮಗ ಮತ್ತು ಮಗಳ ಹೆಸರಿನಲ್ಲಿ ಯಾವುದೇ ಆಸ್ತಿಯನ್ನು ಖರೀದಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ರಾಮಕೃಷ್ಣಪ್ಪನವರು ಕಾಮಗೊಂಡನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರ ಮನೆಯಲ್ಲಿ ವ್ಯವಸಾಯಕ್ಕಾಗಿ ಮೂರು ಜನ ಕೆಲಸಗಾರರು ಇದ್ದರು ಎಂದರೆ ಸಾಕ್ಷಿಯು ಸದರಿ ಕೆಲಸಗಾರರನ್ನು ಮುದ್ದಣ್ಣನವರು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ಮುದ್ದಣ್ಣ ಎನ್ನುವವರು ಹನುಮಾನ್ ಬಸ್ಸಿನ ಮಾಲೀಕರು.
2. ರಾಮಕೃಷ್ಣಪ್ಪನವರ ಜಮೀನಿನಲ್ಲಿ ಯಾರು ವ್ಯವಸಾಯವನ್ನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ರಾಮಕೃಷ್ಣಪ್ಪನವರು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದರು, ಆದರೆ ಎಲ್ಲಾ ವ್ಯವಹಾರಗಳನ್ನು ನನಗೆ ಹೇಳಿ ಕೇಳಿ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನಾನು ಅಲ್ಲಿಯೇ ಓದಿಕೊಂಡಿರುವ ಕಾರಣ, ನನಗೆ ಎಲ್ಲಾ ವಿಚಾರಗಳು ಗೊತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ತಿಳಿದಿದೆ. ಪ್ರಮಾಣ ಪತ್ರದ ಪುಟ ಸಂಖ್ಯೆ 2 ರಲ್ಲಿ ಎಮ್ಮೆದೊರೆ ಗ್ರಾಮದ ಸರ್ವೆ ನಂ. 116, 135/2 ಮತ್ತು 452 ರನ್ನು ಮುದ್ದಮ್ಮ ಅವರ ಸ್ವಂತ ಹಣದಿಂದ ಮತ್ತು ರಾಮಕೃಷ್ಣಪ್ಪನವರು ಉಡುಗೊರೆಯಾಗಿ ಕೊಟ್ಟ ಹಣದಿಂದ ಸದರಿ ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ನಾನು ಆ ರೀತಿ ಬರೆಸಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರಮಾಣ ಪತ್ರವನ್ನು ಓದಿಯೇ ಸಹಿ ಮಾಡಿದ್ದೇನೆ ನನಗೆ ಕನ್ನಡ ಇಂಗ್ಲೀಷ್ ಓದಲು ಬರುತ್ತದೆ.
3. ರಾಮಕೃಷ್ಣಪ್ಪನವರು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದರು ಎಂದು ಹೇಳಿದ್ದು, ಸದರಿ ವ್ಯವಹಾರಗಳ ಲೆಕ್ಕಪತ್ರವನ್ನು ನಾನೇ ನನ್ನ ಹಸ್ತಾಕ್ಷರದಲ್ಲಿ ಬರೆದಿದ್ದೇನೆ, ಅವುಗಳು ಇವೆ ಎಂದು ನುಡಿಯುತ್ತಾರೆ. ನಾನು ಇಂತಹವರು ಇಷ್ಟು ಹಣವನ್ನು ಕೊಡಬೇಕು ಅದನ್ನು ಪಡೆದುಕೊಂಡು ಬಾ ಎಂದು ಪತ್ರವನ್ನು ಕೊಟ್ಟರೆ, ನಾನು ಅದನ್ನು ತೆಗೆದುಕೊಂಡು ಹೋಗಿ

ಕೊಟ್ಟು, ಅವರು ಹಣವನ್ನು ಕೊಟ್ಟಲ್ಲಿ ಅದನ್ನು ಪಡೆದುಕೊಂಡು ಬಂದು ರಾಮಕೃಷ್ಣಪ್ಪನಿಗೆ ಕೊಡುವುದು ನನ್ನ ಕೆಲಸವಾಗಿತ್ತು ಎಂದರೆ ಸರಿ. ನನ್ನನ್ನು ಹೊರತುಪಡಿಸಿ ಲೇವಾದೇವಿ ವ್ಯವಹಾರವನ್ನು ನೋಡಿಕೊಳ್ಳಲು ಇನ್ನು ಇಬ್ಬರನ್ನು ಇಟ್ಟುಕೊಂಡಿದ್ದರು ಎಂದರೆ ಸರಿ, ಅವರುಗಳು ಬೊಮ್ಮಲಿಂಗಯ್ಯ ಮತ್ತು ವೀರಕ್ಯಾತಯ್ಯ ಎಂದರೆ ಸರಿ.

4. ಅವರೂ ಸಹ ನನ್ನಂತೆ ಪತ್ರವನ್ನು ತೆಗೆದುಕೊಂಡು ಹೋಗಿ ಹಣವನ್ನು ಪಡೆದುಕೊಂಡು ಬಂದು ಹಣವನ್ನು ರಾಮಕೃಷ್ಣಪ್ಪನಿಗೆ ಕೊಡುತ್ತಿದ್ದರು ಎಂದರೆ ಸಾಕ್ಷಿಯು ಲೆಕ್ಕವನ್ನು ಪಡೆದು ಹಣವನ್ನು ಬ್ಯಾಂಕಿಗೆ ಪಾವತಿ ಮಾಡುವ ಕೆಲಸ ವೀರಕ್ಯಾತಪ್ಪನ ಕೆಲಸ ಹಾಗೂ ಹಣವನ್ನು ವಸೂಲಿ ಮಾಡುವ ಕೆಲಸ ಬೊಮ್ಮಲಿಂಗಯ್ಯನದ್ದಾಗಿತ್ತು ಎಂದು ನುಡಿಯುತ್ತಾರೆ. ನಾನು ಅಧಿಕಾರಗಳ ಬಳಿ ಹೋಗಿ ಮಾತ್ರ ಹಣವನ್ನು ವಸೂಲಿ ಮಾಡಿಕೊಂಡು ಬರುತ್ತಿದ್ದೆವು, ಅಧಿಕಾರಿಗಳೂ ಸಹ ಅವರ ಬಳಿ ಸಾಲವನ್ನು ಪಡೆಯುತ್ತಿದ್ದರು.

5. ಕಾಮಗೊಂಡನಹಳ್ಳಿ ಸರ್ವೆ ನಂ. 135, 9, 136, 134 ರ ಜಮೀನುಗಳನ್ನು ಮುದ್ದಮ್ಮ ಮತ್ತು ರಾಮಕೃಷ್ಣಪ್ಪನವರು ಜಂಟಿಯಾಗಿ ಖರೀದಿ ಮಾಡಿದ್ದಾರೆ ಎಂದು ನನ್ನ ಪ್ರಮಾಣ ಪತ್ರದ ಪುಟ ಸಂಖ್ಯೆ 2 ರಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನುಗಳು ವಾದಿಯ ಅಜ್ಜಿಯ ಜಮೀನುಗಳು ಎಂದು ನುಡಿಯುತ್ತಾರೆ. ಸದರಿಯವರು ಅವರ ಮಗಳಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಆ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರಬಹುದು, ಆದರೆ ಅದು ನಿಜ ಅಲ್ಲ, ಸದರಿ ಜಮೀನುಗಳು ವಾದಿಯ ಅಜ್ಜಿ ಲಕ್ಷ್ಮಜ್ಜಿಯ ಜಮೀನುಗಳು ಎಂದು ನುಡಿಯುತ್ತಾರೆ. ನಾರಾಯಣಪ್ಪನವರ ಜಮೀನುಗಳು ಖರೀದಿ ಮಾಡಿರುವ ಜಮೀನುಗಳು ಆಗಿವೆ, ಅವುಗಳನ್ನು ರಾಮಕೃಷ್ಣಪ್ಪನವರು ಖರೀದಿ ಮಾಡಿದ್ದಾರೆ.

6. ರಾಮಕೃಷ್ಣಪ್ಪನವರು ಎಂದಿಗೂ ಫಾರಂ ಹೌಸ್ ನಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಕಾಮಗೊಂಡನಹಳ್ಳಿಯ ಮುದ್ದಣ್ಣನವರ ಜಮೀನಿನ ಉಸ್ತುವಾರಿಯನ್ನು ನೋಡಿಕೊಳ್ಳುವ ಮನೆಯಲ್ಲಿ ಇದ್ದರು. ಕಾಮಗೊಂಡನಹಳ್ಳಿಯಲ್ಲಿ ರಾಮಕೃಷ್ಣಪ್ಪನಿಗೆ ಸ್ವಂತ ಮನೆ ಇರಲಿಲ್ಲ. ರಾಮಕೃಷ್ಣಪ್ಪನವರು ತಮ್ಮ ಸ್ವಂತ ಮನೆಯಾದ ಕಾಮಗೊಂಡನಹಳ್ಳಿಯ ಫಾರಂ ಹೌಸ್ ನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ರಾಮಕೃಷ್ಣಪ್ಪನವರ ಕೂಲಿಯಾಳುಗಳೇ ವಾದಿಯ ಅಜ್ಜಿ ಲಕ್ಷ್ಮಮ್ಮನವರ ಜಮೀನಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ಅಜ್ಜಿಯವರೇ ಅದನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಅಜ್ಜಿ ಇದ್ದಂತಹ

ಗುಂಡಪ್ಪಚಿಕ್ಕೇನಹಳ್ಳಿಗೂ ಮತ್ತು ಕಾಮಗೊಂಡನಹಳ್ಳಿಗೂ ಸುಮಾರು 3-4 ಕಿ.ಮೀ. ಇದೆ. ಗುಂಡಪ್ಪಚಿಕ್ಕೇನಹಳ್ಳಿಯಲ್ಲಿ ನನಗೆ ಯಾವುದೇ ಸ್ವಂತ ಜಮೀನು ಇರಲಿಲ್ಲ. ನನ್ನ ಜಮೀನು ಕಾಮಗೊಂಡನಹಳ್ಳಿಯಲ್ಲಿ 3 ಎಕರೆ 35 ಗುಂಟೆ ಜಮೀನು ಇತ್ತು, ಅದನ್ನು ಹೊರತುಪಡಿಸಿ ಬೇರೆ ಯಾವ ಜಮೀನು ಇರಲಿಲ್ಲ.

7. ನಾನು ಪ್ರತಿ ದಿನ ಊಟ ಮತ್ತು ತಿಂಡಿಯನ್ನು ನಮ್ಮ ಮನೆಯಲ್ಲಿ ಮಾಡುತ್ತಿದ್ದೆನು ಎಂದರೆ ಸಾಕ್ಷಿಯು ಕಾಮಗೊಂಡನಹಳ್ಳಿಯ ಮುದ್ದಣ್ಣನವರ ತೋಟದ ಮನೆಯಲ್ಲಿ ಉಸ್ತುವಾರಿಗಾಗಿ ರಾಮಕೃಷ್ಣಪ್ಪನ ಜೊತೆ ನಾನು ಉಳಿದುಕೊಂಡಿದ್ದು, ಅಲ್ಲಿಗೆ ವಾದಿಯ ತಾಯಿ ಮುದ್ದಮ್ಮನವರು ಊಟವನ್ನು ಮುದ್ದಣ್ಣನ ಮನೆಯಿಂದ ಕೊಟ್ಟು ಕಳುಹಿಸುತ್ತಿದದರು. ಸದರಿ ಮನೆಯಲ್ಲಿ ರಾಮಕೃಷ್ಣಪ್ಪ, ಅವರ ಹೆಂಡತಿ ಮುದ್ದಮ್ಮನವರು ಮುದ್ದಣ್ಣನ ಮನೆಯಲ್ಲಿ ವಾಸವಾಗಿದ್ದರು. ರಾಮಕೃಷ್ಣಪ್ಪನವರ ಮಗಳೂ ಸಹ ಮುದ್ದಣ್ಣನ ಮನೆಯಲ್ಲಿ ವಾಸವಿದ್ದರು, ಅಲ್ಲಿಯೇ ಓದುತ್ತಿದ್ದರು, ಮಗ ಬೆಂಗಳೂರಿನಲ್ಲಿ ಓದುತ್ತಿದ್ದನು. ಮುದ್ದಣ್ಣನ ಮನಗೂ ಮತ್ತು ಅವರ ಫಾರಂ ಹೌಸ್ ಗೂ ಸುಮಾರು 1 ಪರ್ಲಾಂಗ್ ದೂರವಿದೆ. ನನ್ನನ್ನು ಕೆಲಸಕ್ಕೆ ರಾಮಕೃಷ್ಣಪ್ಪನವರು ಇಟ್ಟುಕೊಂಡಿದ್ದರೋ ಅಥವಾ ಮುದ್ದಣ್ಣನವರೋ ಎಂದರೆ ಸಾಕ್ಷಿಯು ಮುದ್ದಣ್ಣನವರು ಕೆಲಸಕ್ಕೆ ನನ್ನನ್ನು ಇಟ್ಟುಕೊಂಡಿದ್ದರು, ಸಂಬಳವನ್ನು ರಾಮಕೃಷ್ಣಪ್ಪನವರ ಮುಖಾಂತರ ಕೊಡಿಸುತ್ತಿದ್ದರು.

8. ರಾಮಕೃಷ್ಣಪ್ಪನವರು ತಮ್ಮ ಸ್ವಂತಕ್ಕೆ ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದರು. ರಂಗನಾಥ ರವರ ಅಪ್ಪ ಮುದ್ದಣ್ಣ ಮತ್ತು ರಾಮಕೃಷ್ಣಪ್ಪನವರ ಅಪ್ಪ ಇಬ್ಬರೂ ಸ್ವಂತ ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ, ಅವರು ಬೇರೆ ಬೇರೆ. ರಾಮಕೃಷ್ಣಪ್ಪನವರ ತಂದೆಯ ಹೆಸರು ಮುದ್ದಣ್ಣ. ರಂಗನಾಥಪ್ಪನವರ ತಂದೆ ಮುದ್ದಣ್ಣನವರ ಊರಿನಲ್ಲಿ ಇರುವ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಊರಿನಲ್ಲಿ ಇರುವ ಮನೆಯೊಳಗೆ ಎಂದಿಗೂ ನಾನು ಹೋಗಿಲ್ಲ ಎಂದರೆ ಸರಿಯಲ್ಲ, ಅಲ್ಲಿಗೆ ನಾನು ಹೋಗುವ ಪ್ರಮೇಯವೇ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯವರು ಮುದ್ದಣ್ಣನವರಿಗೆ ವಯಕ್ತಿಕವಾಗಿ ಸಹಾಯಕರಾಗಿ ಕೆಲಸ ಮಾಡುತ್ತಿದದರಿಂದ ನಾವು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ಲಕ್ಷ್ಮಮ್ಮನವರ ಮನೆಗೆ ಅವರನ್ನು ನೋಡಿಕೊಂಡು ಬರಲು ಹೋಗಿ ಬಂದು ಮಾಡುತ್ತಿದ್ದೆನು. ವಾದಿಯು ಪದವಿಯನ್ನು ಪಾಸು ಮಾಡಿದ ನಂತರ ಅವರ ಅಜ್ಜಿ ಅವರಿಗೆ ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದರು. ರೂ. 15,000/- ರೂಪಾಯಿಗಳನ್ನು ಕೊಡುವಂತೆ ಹೇಳಿದ್ದರು, ಅದರಲ್ಲಿ ರೂ.

10,000/- ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟು ಉಳಿದ ರೂ. 5,000/- ರೂಪಾಯಿಗಳನ್ನು ನಂತರ ಕೊಟ್ಟಿದ್ದರು, ಸದರಿ ವಿಚಾರವನ್ನು ವಾದಿಗಳ ತಂದೆ ತಾಯಿ ಖುದ್ದಾಗಿ ನನಗೆ ವಿಚಾರವನ್ನು ತಿಳಿಸಿದ್ದರು. ಅವರು ಪದವಿಯನ್ನು ಪಾಸಾದ 2-3 ಅಂತರದಲ್ಲಿ ಕೊಟ್ಟಿದ್ದಾರೆ. ಹಣವನ್ನು ಕೊಟ್ಟ ಸಮಯದಲ್ಲಿ ನಾನು ಇರಲಿಲ್ಲ, ಆದರೆ ವಾದಿಯ ತಂದೆ ತಾಯಿ ನನಗೆ ವಿಚಾರವನ್ನು ತಿಳಿಸಿದ್ದರು.

9. ಲಕ್ಷ್ಮಮ್ಮನಿಗೆ ರೂ. 15,000/- ರೂಪಾಯಿಗಳನ್ನು ವಾದಿಗೆ ಕೊಡುವಷ್ಟು ಅನುಕೂಲವಿರಲಿಲ್ಲ ಎಂದರೆ ಸರಿಯಲ್ಲ. ಎಂದಿಗೂ ಸಹ ವಾದಿಗೆ ಪದವಿಯನ್ನು ಪೂರೈಸಿದ್ದಲ್ಲಿ ಹಣವನ್ನು ಕೊಡುವುದಾಗಿ ಹೇಳಿದ್ದೂ ಇಲ್ಲ, ಕೊಟ್ಟೂ ಸಹ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ರೂ 10,000/- ರೂಪಾಯಿಗಳನ್ನು ರೇಣುಕಾದೇವಿಗೆ ಅವರ ಅಜ್ಜಿ ಕೊಡುತ್ತೇನೆ ಎಂದು ಹೇಳಿದ್ದು, ಅದರಂತೆ ರೂ. 10,000/- ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ರೂ 10,000/- ರೂಪಾಯಿಗಳನ್ನು ಮುಂಗಡವಾಗಿ ಕೊಡಲಾಗಿದ್ದು, ನಂತರ ರೂ. 5,000/- ರೂಪಾಯಿಗಳನ್ನು ಕೊಡಲಾಗಿದೆ, ಒಟ್ಟು ರೂ. 15,000/- ರೂಪಾಯಿಗಳನ್ನು ಕೊಟ್ಟಿದ್ದಾರೆ. ರೂ. 15,000/- ಕೊಟ್ಟಿರುವುದರ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ, ಆದರೆ ನಾನು ಈಗ ಹೇಳುತ್ತಿದ್ದೇನೆ.

10. ಕಾಮಗೊಂಡನಹಳ್ಳಿಗೂ ಮತ್ತು ಶಿರಾಗೂ ಸುಮಾರು 15 ಕಿ.ಮೀ. ಅಂತರವಿದೆ. ಕಲ್ಲುಕೋಟೆ ಸರ್ವೆ ನಂ. 51 ರ ಜಮೀನಿನ ಸುತ್ತ ಮುತ್ತ ಅಥವಾ ಶಿರಾದ ಸುತ್ತಾಮುತ್ತಾ ನನಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ಕಲ್ಲುಕೋಟೆ ಸರ್ವೆ ನಂ.51 ರ ಜಮೀನು 3 ಎಕರೆ 10 ಗುಂಟೆ ಇದೆ, ಆದರೆ ಅದರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಖರೀದಿ ಮಾಡುವ ಸಮಯದಲ್ಲಿ ಅದರ ಸರ್ವೆ ನಂ. 51/ಎ13 ಆಗಿತ್ತು. ಕ್ರಯ ಪತ್ರದಲ್ಲಿಯೂ ಸಹ ಅದೇ ರೀತಿ ಬರೆದಿದೆ ಸದರಿ ಜಮೀನಿನ ಪಶ್ಚಿಮಕ್ಕೆ ಮಾಲೀ ಸುರೇಶ್ ರವರ ಜಮೀನು ಇದೆ, ಪೂರ್ವಕ್ಕೆ ಶ್ರೀನಿವಾಸ ಶೆಟ್ಟರ್ ರವರ ಜಾಗ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸುರೇಶ್ ರವರ ಸೈಟು ಇದೆ.

11. ಸದರಿ ಆಸ್ತಿಯ ಬಳಿ ನಾನು ಎಂದೂ ಹೋಗಿಲ್ಲ ಮತ್ತು ಹೋಗುವಂತ ಪ್ರಮೇಯ ಬರಲಿಲ್ಲ ಎಂದರೆ ಸರಿಯಲ್ಲ. ಖರೀದಿಯಾದ ನಂತರ ಸುಮಾರು ಬಾರಿ ಹೋಗಿದ್ದೇನೆ. ನಾನು ವಾದಿಯ ಜಮೀನಿನಲ್ಲಿ ಏನೆಲ್ಲಾ ಹಾಕಿದ್ದಾರೆ, ಇಲ್ಲ ಎಂದು ನೋಡಿಕೊಂಡು ಬರಲು

ಹೋಗುತ್ತಿದ್ದೆ. ಶಿರಾದ ಪಕ್ಕದಲ್ಲಿ ಇರುವ ಜಾಗವಾದ ಕಾರಣ ಮೊದಲಿನಿಂದಲೂ ಅದು ಖಾಲಿ ಜಮೀನು ಆಗಿದ್ದು, ಅದರಲ್ಲಿ ಯಾವುದೇ ಬೆಳೆ ತೆಗೆದಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ತಮ್ಮ ಒಟ್ಟು ಕುಟುಂಬದ ಹಣದಿಂದ ರಾಮಕೃಷ್ಣಪ್ಪನವರು ಅವರ ಮಗಳಾದ ವಾದಿಯ ಹೆಸರಿಗೆ ಖರೀದಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಅವರ ಅಜ್ಜಿ ಖರೀದಿ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಪರ ಹಣವನ್ನು ಪಡೆದು ಸದರಿ ಜಮೀನಿನ ವ್ಯವಹಾರದ ಬಗ್ಗೆ ವಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ತಾಯಿ ಎಂದಿಗೂ ಸಹ ಲಕ್ಷ್ಮಮ್ಮನವರು ವಾದಿಗೆ ರೂ. 15,000/- ಹಣವನ್ನು ಕೊಟ್ಟಿರುವ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

12. ಕಲ್ಲುಕೋಟೆಯ ಜಮೀನನ್ನು ಎಷ್ಟು ಹಣಕ್ಕೆ ವಾದಿಯು ಖರೀದಿ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ, ಅವರ ಅಜ್ಜಿ ಹಣವನ್ನು ಕೊಟ್ಟಿರುವುದು ಬಿಟ್ಟರೆ ಬೇರೆ ಯಾವ ಮಾಹಿತಿಯೂ ನನಗೆ ಇಲ್ಲ. ಖರೀದಿಯ ಮಾತುಕತೆ ನನ್ನ ಸಮಕ್ಷಮ ಮಾಡಲಿಲ್ಲ, ಕ್ರಯ ಪತ್ರವಾದ ಸಮಯದಲ್ಲಿ ನಾನು ಇದ್ದೆ ಸಾಕ್ಷಿಯಾಗಿ ಸಹಿ ಮಾಡಿಲ್ಲ. ಯಾರೆಲ್ಲಾ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ರಾಮಕೃಷ್ಣಪ್ಪ ಇದ್ದರು, ಅವರು ಸಾಕ್ಷಿಯಾಗಿ ಸಹಿ ಮಾಡಿಲ್ಲ. ವಾದಿಯ ಅಜ್ಜಿ ಲಕ್ಷ್ಮಮ್ಮನವರು ಹಣವನ್ನು ಲಿಂಗಪ್ಪನಿಗೆ ಕೊಟ್ಟಿದ್ದಾರೆ, ಆ ಸಮಯದಲ್ಲಿ ರಾಮಕೃಷ್ಣಪ್ಪ ಸಹ ಇದ್ದರು. ಉಳಿದ ಹಣದಲ್ಲಿ ವಾದಿಯು ಬಂಗಾರದ ಒಡವೆಯನ್ನು ತೆಗೆದುಕೊಂಡಿರುವುದಾಗಿ ತಿಳಿಸಿದ್ದರು, ಆದರೆ ಏನೆ ತೆಗೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**